ಸಿರಿಗನ್ನಡಂ ಗೆಲ್ಗೆ !

# ಹೈದರಾಬಾದು ಕರ್ನಾಟಕ ಸಾಹಿತ್ಯ ಸಮ್ಮೇಲನ

ಮೂರನೆಯ ಅಧಿವೇಶನ

**ಯಾದಗಿರಿ.**

## ಅಧ್ಯಕ್ಷರ ಭಾಷಣ



ಅಧ್ಯಕ್ಷರು-

**ಸಿದ್ಧಯ್ಯ ಕಲ್ಲಿನಾಥಶಾಸ್ತ್ರಿ ಪುರಾಣಿಕ B.A.,LL.B.**

( ದಿನಾಂಕ: ೨೯, ೩೦, – ೧೯೫೩ ಇಸ್ವಿ.

: ಸಿರಿಗನ್ನಡಂ ಗೆಲ್ಗೆ :

ಹೈದರಾಬಾದು ಕರ್ನಾಟಕ ಸಾಹಿತ್ಯ ಸಮ್ಮೇಳನ

ಮೂರನೆಯ ಅಧಿವೇಶನ

ಶ[illegible] (ಸುರಪುರ)

## ಅಧ್ಯಕ್ಷ ಭಾಷಣ

# ಸಾಹಿತ್ಯಸಂಪಾದನೆ

---

ನಮ್ಮ ಸಾಹಿತ್ಯವು ಸಹಜೀವನದ ಮಂತ್ರವಾಗಲಿ;
ನಮ್ಮ ಏಕೀಕರಣವು ಅದರ ತಂತ್ರವಾಗಲಿ;
ನಮ್ಮ ಜನ ಅದರ ಯಂತ್ರವಾಗಲಿ ;
ನಮ್ಮ ವಿಶ್ವವಿದ್ಯಾಲಯು ಇವರ ಆಚಾರ ಪೀಠವಾಗಲಿ;
ನಮ್ಮ ಪರಿಷತ್ತು ಇದರ ಪ್ರಚಾರ ಪೀಠವಾಗಲಿ;

—ನಾಡಕವಿ ಬೇಂದ್ರೆ

---

ಅಧ್ಯಕ್ಷರು :

ಸಿದ್ಧಯ್ಯ ಕಲ್ಲಿನಾಥಶಾಸ್ತ್ರೀ ಪುರಾಣಿಕ ಬಿ.ಎ.,ಎಲ್ಎಲ್.ಬಿ.

"Let the artist be always alive to his duty towards the masses."

*-Mahatma Gandhi*

"It was my songs that taught me allthe lessons I ever learnt; they showed me secret paths; they brought before my sight many a star on the horizon of my heart.

"My powers are thine; let mine be thy fearless song."

*-Rabindranath Tagore*

"The voice of poetry comes from a region above us, a plane of our being above and beyond our personal intelligence, a supermind which sees things in their innermost and largest truth by a spiritual identity."

*-Sri Aurobindo*

"Whatever you may say of the value of good literature, if anything can transform the nature of man, it is that. It does so unconsciously and insensibly and it gives you an altered out-look. There is a saying that where there is no vision, people perish. Its meaning is that where there are no great artists to present to the country a vision if its future, the country itself would stagnate. They are people who stand outside history and still make history. They do not aim to

ಶ್ರೀಃ

ವರ್ಣಾನಾಮರ್ಥ ಸಂಘಾನಾಂ ರಸಾನಾಂ ಛಂದಸಾಮಪಿ।
ಮಂಗಲಾನಾಂಚ ಕರ್ತಾರೌ ವಂದೇ ವಾಣೀ ವಿನಾಯಕೌ॥
ಆಂಗಿಕಂ ಭುವನಂ ಯಸ್ಯ ವಾಚಿಕಂ ಸರ್ವವಾಙ್ಮಯಂ।
ಆಹಾರ್ಯಂ ಚಂದ್ರ ತಾರಾದಿ ತನ್ನುಮಸ್ಸಾತ್ವಿಕಂ ಶಿವಂ॥
ಯಸ್ಯಾಃ ಪ್ರಸಾದ ಮಾತ್ರೇಣ ಸರ್ವಮುನ್ಮೀಲತಿ ಕ್ಷಣಾತ್।
ಕಾವ್ಯಾರ್ಥ ಸಾರಭೂತಾಂ ತಾಂ ವಂದೇಽಹಂ ಪ್ರತಿಭಾಂ ಶುಭಾಂ॥

ಕನ್ನಡ ಸರಸ್ವತಿಯ ಸಮಾರಾಧನೆಗಾಗಿ ಸನ್ನಿಹಿತರಾಗಿರುವ ಸಹೋದರ ಸಹೋದರಿಯರೆ!

ಇಂದು ಈ ಇತಿಹಾಸ ಪ್ರಸಿದ್ಧ ಸ್ಥಳದಲ್ಲಿ ಜರುಗುತ್ತಿರುವ ಮೂರನೆಯ ಹೈದರಾಬಾದು ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ಗೌರವಿಸಿರುವ ತಮಗೆಲ್ಲ ತುಂಬಿದೆದೆಯಿಂದ ತಲೆಬಾಗುತ್ತೇನೆ. ರಾಯಚೂರು, ಮಾನ್ವಿಗಳಲ್ಲಿ ಸೇರಿದ್ದ ಮೊದಲನೆಯ ಮತ್ತು ಎರಡನೆಯ ಸಮ್ಮೇಲನಗಳ ಅಧ್ಯಕ್ಷರಾಗಿದ್ದ ಆಚಾರ್ಯ ಡಿ. ಕೆ. ಭೀಮಸೇನರಾಯರೂ, ವಿದ್ಯಾಲಂಕಾರ ಚಂದ್ರಶೇಖರ ಶಾಸ್ತ್ರಿಗಳವರೂ ಹೈದರಾಬಾದು ಕನ್ನಡಿಗರಿಗಷ್ಟೇ ಅಲ್ಲ, ಎಲ್ಲ ಕನ್ನಡಿಗರಿಗೆ ಹೆಮ್ಮೆ ಹುಟ್ಟಿಸುವಂಥ ಪಂಡಿತರು; ನಮ್ಮ ಹಿರಿಯರಲ್ಲಿ ಹಿರಿಯರಾದವರು. ಅವರು ಅಲಂಕರಿಸಿದ್ದ ಈ ಸ್ಥಾನವನ್ನು ಎಂತು ಏರಲಿ ಎಂದು ಚಿಂತೆಗೊಳಗಾಗಿದ್ದೇನೆ. ನನಗಿಂತ ವಿದ್ಯೆಯಲ್ಲಿ, ಬುದ್ಧಿಯಲ್ಲಿ, ಸಿದ್ಧಿಯಲ್ಲಿ, ಶುದ್ಧಿಯಲ್ಲಿ, ಪ್ರಸಿದ್ಧಿಯಲ್ಲಿ ಮಿಗಿಲಾದವರು ಇದೇ ಹೈದರಾಬಾದು ಕರ್ನಾಟಕದಲ್ಲಿಯೇ–ಅಷ್ಟೇಕೆ – ಈಗ ಇಲ್ಲಿ ನೆರೆದಿರುವ ತಮ್ಮ ಮಧ್ಯದಲ್ಲಿಯೇ ಇದ್ದಾರೆ. ಅವರನ್ನುಳಿದು ಅಪ್ರಬುದ್ಧನಾದ ನನ್ನನ್ನು ಈ ಎತ್ತರಕ್ಕೆ ಎತ್ತಿದುದು ಸರಿಯಾದುದಲ್ಲವೆಂದೇ ನನ್ನ ನಂಬಿಕೆ. ಉತ್ತಮರನ್ನು ಎತ್ತಿ ಹಿಡಿಯುವುದೇ ಸಾಹಿತ್ಯದ ಶ್ರೇಯೋಮಾರ್ಗವಾಗಿದೆ. ಇದನ್ನು ನೆನೆದು, ಇನ್ನೂ ಸಾಧ್ಯವಿದ್ದರೆ ಈ ಸ್ಥಾನಕೆ

ಇನ್ನೊಬ್ಬ ಹಿರಿಯ ಕನ್ನಡಿಗರನ್ನು ಆಹ್ವಾನಿಸಿರೆಂದು ಸ್ವಾಗತ ಸಮಿತಿಗೂ ಬರೆದುಕೊಂಡೆ. ಆದರೆ ಸ್ವಾಗತ ಸಮಿತಿಯ ಸ್ನೇಹಿತರು ಕಾರಣಾಂತರಗಳಿಂದ ತಮ್ಮಮೊದಲಿನ ನಿಶ್ಚಯವನ್ನೇ ದೃಢೀಕರಿಸಿದರಾಗಿ ಅನಿವಾರ್ಯವಾದುದನ್ನು ಅನುಭವಿಸಲೇಬೇಕೆಂಬ ಜಾಣ್ಣುಡಿಯಂತೆ ಈ ಒಪ್ಪದ ಕಾರ್ಯಕ್ಕೆ ಒಪ್ಪಿ ಬಂದಿದ್ದೇನೆ. ಮೇಲಕ್ಕೆತ್ತಿದವರು ಮಧ್ಯದಲ್ಲಿಯೇ ಕೈ ಬಿಡದೆ ನನ್ನನ್ನು ಕೈ ಹಿಡಿದು ನಡೆಯಿಸಿಕೊಂಡು ಹೋಗುವರೆಂಬ ನಂಬಿಗೆಯ ಬಲವೊಂದಿಲ್ಲದಿದ್ದರೆ ಇಷ್ಟಕ್ಕೂ ಒಪ್ಪುತ್ತಿರಲಿಲ್ಲವೆಂದು ನಮ್ರತೆಯಿಂದ ನಿವೇದಿಸಿಕೊಳ್ಳುವೆ.

೧೯೪೫ರಲ್ಲಿ ಮಹೋತ್ಸಾಹದೊಡನೆ ಮೊದಲಾದ ಈ ಸಮ್ಮೇಲನವು ಮಾನ್ವಿಯಲ್ಲಿ ಎರಡನೆಯಸಲ ಸೇರಿ ತಟಸ್ಥವಾಗಿಬಿಟ್ಟದ್ದಿತು. ಯಾವ ಪ್ರತಿಕೂಲ ಪರಿಸ್ಥಿತಿಯ ಮೂಲಕ ಅದು ತಾಟಸ್ಥ್ಯವನ್ನು ವಹಿಸಿದ್ದಿತೋ ಆ ಪ್ರತಿಕೂಲವೂ, ವಿಷಮವೂ, ವಿಷಮಯವೂ ಆದ ಪರಿಸ್ಥಿತಿಯು ದೂರಾಗಿಯೂ ಐದು ವರ್ಷಗಳು ಉರುಳಿದುವು. ಆದರೂ ಈ ಸಮ್ಮೇಲನವನ್ನು ಜಾಗೃತಗೊಳಿಸುವ, ಜೀವಂತಗೊಳಿಸುವ ಗೊಡವೆಗೆ ಯಾರೂ ಹೋಗಿರಲಿಲ್ಲ. ಆದರೆ ರಂಗಂಪೇಟೆ ಸುರಪುರಗಳ ಕನ್ನಡ ಭಕ್ತರು ಮುಂದೆ ಬಂದು ನಷ್ಟಚೇತನವಾಗಿದ್ದ ಈ ಸಮ್ಮೇಲನವನ್ನು ಸ್ಫೂರ್ತಿಚೇತನಗೊಳಿಸಿದ್ದಾರೆ. ಇದಕ್ಕಾಗಿ ಹೈದರಾಬಾದು ರಾಜ್ಯದ ಸಮಸ್ತ ಕನ್ನಡಿಗರ ಪರವಾಗಿ ರಂಗಂಪೇಟೆ, ಸುರಪುರ, ಶಹಾಪುರಗಳ ಕನ್ನಡ ಬಂಧು ಭಗಿನಿಯರಿಗೆ ಗೌರವಪುರಸ್ಸರವಾದ ಅಭಿನಂದನೆಗಳನ್ನೂ ಅಭಿವಂದನೆಗಳನ್ನೂ ಅರ್ಪಿಸುತ್ತೇನೆ.

ಈ ಸಾಹಿತ್ಯ ಸಮ್ಮೇಲನದ ಬಗ್ಗೆ ಸ್ವರಾಜ್ಯಸಿದ್ಧಿಯಾದ ಮೇಲೂ, ಪೋಲಿಸ್ ಕಾರ್ಯಾಚರಣೆಯಾದಮೇಲೂ, ಸಾರ್ವತ್ರಿಕ ಆಯ್ಕೆಗಳು ನಡೆದು ಜನಪ್ರಿಯ ಪ್ರಜಾಸತ್ತಾತ್ಮಕ ಮಂತ್ರಿ ಮಂಡಳಗಳು ಬಂದಮೇಲೂ ಇದುವರೆಗೆ ಏಕೆ ಅನಾದರಅವಜ್ಞೆ, ಅಸಡ್ಡೆಗಳಿದ್ದವೆಂಬುವನ್ನು ತಿಳಿದು ಕೊಳ್ಳದೆ ನಾವು ಮುಂದಡಿಯಿಡಲಾರೆವು. ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ಸ್ವಾತಂತ್ರ್ಯ ಸಂಪಾದನೆ ಮೊದಲು ಆಗಲಿ, ಆಮೇಲೆ ಸಾಹಿತ್ಯ ಸಂಪಾದನೆ,



ಸಂಸ್ಕೃತಿ ಸಂವರ್ಧನೆಗಳು ತಾವಾಗಿಯೇ ಆಗುತ್ತವೆಯೆಂಬ ಮನೋಭಾವ ಎಲ್ಲೆಡೆಗೆ ವ್ಯಕ್ತವಾಗುತ್ತಿದ್ದಿತು. ಈಗ ಸ್ವಾತಂತ್ರ್ಯ ಸಂಪಾದನೆಯ ತರುವಾಯ ಅಧಿಕಾರ ಸಂಪಾದನೆಯ ಸನ್ನಿಪಾತವೇ ಸರ್ವರಿಗೂ ಏರಿದೆಯಾಗಿ ಮತ್ತೆ ಸಾಹಿತ್ಯ ಸಂಪಾದನೆಯ ಸೊಲ್ಲನ್ನು ಕೇಳುವವರಿಲ್ಲವಾಗಿದೆ. ಸಾಹಿತ್ಯವು ಉಪಾಧ್ಯಾಯರು, ವೈದಿಕರು, ಕೆಲಸಗೇಡಿಗಳು, ಅಲೌಕಿಕರು, ಸೋಮಾರಿಗಳು, ಕನಸುಣಿಗಳನ್ನು ಬಿಟ್ಟು ಉಳಿದವರಿಗೆ ಅವ್ಯಾಪಾರೇಷು ವ್ಯಾಪಾರವೆಂಬ ಭಾವನೆ ಬಲಿಯತೊಡಗಿದೆ. ಸ್ವಲ್ಪವಾದರೂ ವಿಚಾರ ಮಾಡಿದರೆ ಸಾಹಿತ್ಯವು 'ಸತ್ತವರ ಕಥೆಯಲ್ಲ; ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕಿದರ ಸೀಮೆಯ ಹೊಲಬಲ್ಲ; ಹೊತ್ತು ಹೋಗದೆ ಪುಂಡರಾಲಿಸ ಮತ್ತ ಮತಿಗಳ ಗೋಷ್ಠಿಯಲ್ಲ ; ಸತ್ಯ ಶರಣರು, ಸಾಹಿತ್ಯ ಶರಣರು ಜೀವನಾದ್ಯಂತ ತಪವನ್ನಾಚರಿಸಿ, ವಿಶ್ವಜೀವದರ್ಶನದ ಧ್ಯಾನಾನುಚಿಂತನೆಗಳಿಂದ ಸಾಧಿಸಿದ ವಿಶ್ವಧರ್ಮದರ್ಶನವೇ ಸಾಹಿತ್ಯವೆಂಬುದು ಹೊಳೆಯದಿರದು.

ಈಗ ನಮ್ಮ ದೇಶದಲ್ಲಿ ರಾಜ್ಯ ಸೂತ್ರಗಳು ಶ್ರೀ ಸಾಮಾನ್ಯರ ಹಸ್ತಗತವಾಗಿರುವುದನ್ನು ನೋಡಿ, ದೇಶದ ಶಾಸನ ವ್ಯವಸ್ಥೆಗಳೂ ಆಡಳಿತದ ಏರ್ಪಾಟುಗಳೂ ಜನ ಸಾಮಾನ್ಯರ ಅಭಿಪ್ರಾಯಗಳನ್ನು ಅನುಸರಿಸಬೇಕೆಂಬ ತತ್ತ್ವ ಅಂಗೀಕೃತವಾಗಿರುವುವನ್ನು ನೋಡಿ, ಶಾಸನಸಭೆ ಲೋಕಸಭೆಗಳಲ್ಲಿ ಪ್ರಜೆಗಳೇ ಆರಿಸಿದ ಪ್ರತಿನಿಧಿಗಳು ಕುಳಿತಿರುವುದನ್ನು ನೋಡಿ ನಮ್ಮೆದೆಗಳಲ್ಲಿ ಆನಂದಲಹರಿಗಳು ಕ್ಷಣಕಾಲ ಸುಳಿದಾಡಿದರೂ ಮತ್ತೆ ನಿರಾಶೆ ಮಡುಗಟ್ಟಿ ನಿಲ್ಲುತ್ತದೆ. ಏಕೆ? ಇದೆಲ್ಲ ಬರಿ ಕಾಗದದಲ್ಲಿ ಬಂದಿದೆ. ಜನರ ಜೀವನದಲ್ಲಿ ಬೆರೆತು ಬಂದಾಗಿಲ್ಲ. ಅದಾಗಬೇಕಾದರೆ ಪ್ರಜಾಸಾಮಾನ್ಯರ ಮನೋಬುದ್ಧಿಗಳು ಸಂಸ್ಕಾರಯುಕ್ತವಾಗಬೇಕು. ಪ್ರಜಾಧಿಕಾರದ ಪ್ರವಾಹವು ನೆರೆಯ ಹಾವಳಿಯಾಗದೆ ನೀರಾವರಿಯಂತೆ ನಾಡಿಗೆ ಕ್ಷೇಮಕರವೂ ಕಲ್ಯಾಣಕಾರಕವೂ ಆಗಬೇಕಾದರೆ ಪ್ರಜಾ ಪ್ರತಿನಿಧಿಗಳು ಮಾತ್ರವೇ ಅಲ್ಲ, ಅವರನ್ನು ಆರಿಸುವ ಪ್ರಜೆಗಳೂ'ಸಹ'ಮನೋಮಯ ಪ್ರಾಣಶರೀರ ನೇತಾ'ಎಂಬುದನ್ನು

ಅರಿತವರಾಗಿರಬೇಕು; ಪಶ್ಯಂತಿ ಬುದ್ಧಿ ಮತ್ತು ಪಶ್ಯಂತಿ ವಾಕ್ಕುಗಳನ್ನು ಅಳವಡಿಸಿಕೊಂಡವರಾಗಿರಬೇಕು. ಈ ಸಂಸ್ಥಿತಿಯನ್ನು ಉಂಟುಮಾಡಬಲ್ಲ ಶಕ್ತಿಯಿರುವುದು ಸಾಹಿತ್ಯಕ್ಕೆ ಮಾತ್ರ. ಸಾಹಿತ್ಯ ಸಂಸ್ಕಾರವನ್ನು ಪಡೆಯದವರು, – ರಾಮನ ಪ್ರತಿಜ್ಞೆ, ಭರತನ ಬಂಧುಪ್ರೇಮ, ಧರ್ಮನ ಧರ್ಮರತಿ, ಭೀಷ್ಮನ ಅತ್ಯುನ್ನತಿ, ಕರ್ಣನ ದಾನಬುದ್ಧಿ, ಕೃಷ್ಣನ ಬುದ್ಧಿಯೋಗ, ಹರಿಶ್ಚಂದ್ರನ ಸತ್ಯನಿಷ್ಠೆ, ಬಸವಣ್ಣನವರ ಭಕ್ತಿ, ಭರತೇಶನ ಭೋಗ ಯೋಗ ಸಮನ್ವಯ, ಸೀತೆಯ ಸಹನೆ, ಕುಂತಿಯ ಕೆಚ್ಚು, ದ್ರೌಪದಿಯ ಧೀರತೆ, ಅಕ್ಕಮಹಾದೇವಿಯ ವಿರಕ್ತಿ, ಓಬವ್ವನ ಶಕ್ತಿ, ಕಂತಿಯ ರಸೋಕ್ತಿಗಳನ್ನರಿಯದವರು ಶಾಸನ ಸಭೆಗಳಲ್ಲಿ ಕುಳಿತಾಕ್ಷಣಕ್ಕೆ ಅವರಿಂದ ಎಂಥ ಉದಾರ ಶಾಸನಗಳು ನಡೆದಾವು, ಎಂಥ ನಿರ್ಮಲ ನೀತಿಗಳು ಹೊರಟಾವು, ಎಂಥ ಕಲ್ಯಾಣಕಾರಕ ಕೃತಿಗಳು ಹೊರಬಿದ್ದಾವು?

ರಾಜಕೀಯದ ಉತ್ತಮತೆಗೆ ಸಾಹಿತ್ಯ ಸಂಪಾದನೆಯೇ ಸಾಧನವೆಂದು ಹೇಳದೆ ಗತಿಯಿಲ್ಲ. ಸಾಹಿತ್ಯದ ಲೋಕಾನುಭವ ಶಕ್ತಿ, ಹೃದಯಮರ್ಮ ವಿವೇಚನ ಶಕ್ತಿ, ನೂತನ – ಸಂದರ್ಭ – ಸಂಘಟನ ಶಕ್ತಿಗಳಿಂದ ಜನತಾ ಸಹಾನುಭವ, ಹೃದಯೇಂಗಿತವಿಜ್ಞಾನ, ನೂತನ ಹಿತದರ್ಶನಗಳ ಯೋಗ್ಯತೆಯನ್ನು ಸಾಧಿಸಿಕೊಳ್ಳದೆ ಮಾಡುವ ರಾಜಕಾರಣ ವಿನಾಕಾರಣ-ವೆಂದೇ ಹೇಳಬೇಕು. ಶ್ರೇಷ್ಠ ಸಾಹಿತಿಗಳೂ ಶ್ರೇಷ್ಠ ರಾಜಕಾರಣಿಗಳೂ ಆದ ಶ್ರೀ ಡಿ. ವ್ಹಿ. ಗುಂಡಪ್ಪನವರ ವಿವೇಕವಾಣಿಯನ್ನು ಆಲಿಸಿರಿ – "ಕಾವ್ಯಾಗ್ನಿಯಿಂದ ಬೇಯದ ಜೀವ, ಕಾವ್ಯರಸದಲ್ಲಿ ಈಜಾಡದ ಜೀವ – ಹೇಗೆ ಪರಿಶುದ್ಧವಾದೀತು? ಅದು ಹೇಗೆ ದೊಡ್ಡದನ್ನು ಕಾಣಲಾದೀತು? ಅಂಥ ಜೀವವು ಪ್ರಕೃತಿಯ ಸೆರೆಮನೆಯೇ ತನ್ನ ಅರಮನೆಯೆಂದು ಭ್ರಮಿಸುವಂಥಾದ್ದು. ಅದರ ಕಣ್ಣು ನಿದ್ದೆಗಣ್ಣು; ಅದರ ಕಿವಿ ಮರಗಿವಿ; ಅದರ ನುಡಿ ತೊದಲ್ನುಡಿ. ಅಂಥ ಜನ ಮಾಡುವ ರಾಜ್ಯಶಾಸನ ಡೊಂಬಿಯ ದಬಾ ದುಬಿ.

"ಯಾವ ವಸ್ತು ಸೌಂದರ್ಯ ಗುಣಸೌಂದರ್ಯಗಳಿಂದ ಸಾಹಿತಿಯ ನಿರ್ಮಿತಿ ನಮಗೆ ಆನಂದದಾಯಕವಾಗುತ್ತದೆಯೋ, ಯಾವ ಭಾವ



ಸೌಂದರ್ಯ ಶೀಲಸೌಂದರ್ಯಗಳನ್ನು ತೋರಿಸಿ ಕವಿ ನಮ್ಮನ್ನು ಪರವಶಗೊಳಿಸುತ್ತಾನೆಯೋ – ಆ ದಿವ್ಯ ಸೌಂದರ್ಯಗಳನ್ನು, ಆ ತೇಜಸ್ಸುಗಳನ್ನು ಆ ಔದಾರ್ಯಗಳನ್ನು ಜನತೆಯ ನಿತ್ಯ ಜೀವನದಲ್ಲಿ ಯತ್ಕಿಂಚಿತ್ತಾದರೂ ಘನರೂಪಕ್ಕೆ ತರುವುದು ರಾಜ್ಯ ಕರ್ಮಿಯ ಪ್ರಯತ್ನ. ಪ್ರಪಂಚದ ಮಹಾ ರಾಜ್ಯಕರ್ಮಿಗಳ ಚರಿತ್ರೆ ಇದಕ್ಕೆ ಸಾಕ್ಷಿ."

ಅದೇಕೆ, ನಮ್ಮ ದೇಶದಲ್ಲಿಯೂ ಗಾಂಧೀಜಿ, ಪಂಡಿತಜಿ, ರಾಜಾಜಿಯವರಂತೆ ಸಾಹಿತ್ಯ ರಾಜಕಾರಣಗಳ ಹೃದಯಂಗಮ ಸಂಗಮವಾಗಿ ಶೋಭಿಸುವ ಪುರುಷಶ್ರೇಷ್ಠರಿಲ್ಲವೆ? ಹಿಂದೆ 'ಭೂಪತಿಯು ಕವಿಯಾಗಿ ಕವಿ ಚಮೂಪತಿಯಾಗಿ' ಮೆರೆದುದು ಇದೇ ನಾಡಿನಲ್ಲಿ ಅಲ್ಲವೆ? ಸಾಹಿತ್ಯದ ಸಂಬಂಧ ಹಚ್ಚಿಕೊಂಡಿದ್ದ ಶ್ರೀಹರ್ಷ, ವಿಕ್ರಮ, ನೃಪತುಂಗ, ಕೃಷ್ಣದೇವರಾಯರಂಥ ರಾಜರಿಗೆ, ಬಸವೇಶ್ವರ ವಿದ್ಯಾರಣ್ಯಾರ್ಯರಂಥ ಯೋಗೀಶ್ವರ ಮಂತ್ರೀಶ್ವರರಿಗೆ ಸಾಹಿತ್ಯವು ತೊಡಕಾಯಿತೇ ತೊಡವಾಯಿತೆ? ಮಾತು ಮಾತಿಗೆ ಗಾಂಧೀಜಿಯವರ ಹೆಸರೆತ್ತುವ ನಮ್ಮ ರಾಜ್ಯಕಾರಣ ಪಟುಗಳು ಗಾಂಧೀಜಿಯವರು ಮಾಡಿದ ಮಹತ್ತರವಾದ ಲೋಕೋತ್ತರವಾದ ಸಾಹಿತ್ಯ ಸೃಷ್ಟಿಯ ಲವಲೇಶವನ್ನಾದರೂ ತಾವು ಮಾಡಿದರೆ ದೇಶಕ್ಕೆ ದೊಡ್ಡ ಉಪಕಾರವಾದೀತು! ಆದರೆ ಮತಗಳ ಪೆಟ್ಟಿಗೆಗಳ ಮೇಲೆ ನೆಟ್ಟನಿಂತ ಅವರ ನೋಟವನ್ನು ಇತ್ತ ಯಾರು ತಿರುಗಿಸಬೇಕು? ಬೆಕ್ಕಿಗೆ ಗಂಟೆಯನ್ನಾರು ಕಟ್ಟಬೇಕು?

ಪ್ರಜಾ ಪ್ರತಿನಿಧಿಗಳಾದವರಿಗೆ ಪ್ರಜೆಗಳೇ ಈ ಎಚ್ಚರಿಕೆಯ ಗಂಟೆ ಕಟ್ಟಬೇಕು. ಅವರನ್ನು ಆರಿಸಿದವರೂ ಮೇಲಕ್ಕೇರಿಸಿದವರೂ ಪ್ರಜೆಗಳೇ ಅಲ್ಲವೆ? "ನಮಗೆ ಸಾಹಿತ್ಯವು ನೀಡುವ ಸವಿ, ಬೆಳಕು, ಶಕ್ತಿ, ಜ್ಞಾನ, ದರ್ಶನ, ಆನಂದಗಳು ಇದ್ದಲ್ಲಿಯೇ ಒದಗುವಂತೆ ಮಾಡಿರಿ," ಎಂದು ಪ್ರಜೆಗಳು ಹಟ ಹಿಡಿದರೆ ಪ್ರಜಾಪ್ರತಿನಿಧಿಗಳು ನಿರಾಕರಿಸಲಾರರು. ಇಲ್ಲದಿದ್ದರೆ 'ಸಾಹಿತ್ಯ-ವೆಲ್ಲರಿಗೆ ಇಲ್ಲ!" ಎಂದು ಸರ್ವಜ್ಞನಂತೆ ಮಿಡುಕುವುದೇ ಮಾರ್ಗವಾದೀತು! ಪ್ರಜಾ ರಾಜಕೀಯದಲ್ಲಿ ರಾಜ್ಯಕ್ಷೇಮದ ಉತ್ತರಭಾರವು ಪ್ರತಿಯೊಬ್ಬ ಪ್ರಜೆಯಮೇಲೂ ಸಮನಾಗಿ ಬಿದ್ದಿರುವಾಗ ಆ ಹೊಣೆಗಾರಿಕೆಯನ್ನು

ನಿರ್ವಹಿಸಲು ಬೇಕಾಗುವ ಹಿತಾಹಿತ ವಿವೇಕವನ್ನು ಹಿತದಿಂದ ಸಹಿತವಾದ ಸಾಹಿತ್ಯದ ಸಂಪಾದನೆಯಿಂದ ಸಂಪಾದಿಸಿಕೊಳ್ಳದಿದ್ದರೆ ದೇಶದ ಗತಿ ದೇವರೇ ಗತಿ!

ಎಷ್ಟೇ ಪರಿಪೂರ್ಣವಾದ ಪ್ರಜಾತಂತ್ರವಿದ್ದರೂ ಅದರಲ್ಲಿ ವ್ಯಕ್ತಿ-ಸಾಪೇಕ್ಷ ಅಧಿಕಾರವು ದುರುಪಯೋಗವಾಗುವ ಭಯವಿದ್ದೇ ಇರುತ್ತದೆ. ಇಲ್ಲವೆ ಶಕ್ತಿಯು ಮನುಷ್ಯನನ್ನು ಮತ್ತನನ್ನಾಗಿ ಮಾಡಿ ಅವನ ಕರಗತವಾದ ಶಕ್ತಿಯನ್ನು ರಾಕ್ಷಸನನ್ನಾಗಿ ಮಾಡಿಬಿಡುತ್ತದೆ. ರಾಕ್ಷಸರೆಂಬುದು ಒಂದು ಜಾತಿಯಲ್ಲ, ಜನಾಂಗವಲ್ಲ; ಶಕ್ತಿಯ ದುರುಪಯೋಗ ಮಾಡುವವರೇ ರಾಕ್ಷಸರು. ಈ ವ್ಯಕ್ತಿಗತ ಶಕ್ತಿ (Personal authority) ಸಜ್ಜನಿಕೆಯಿಲ್ಲದ ಸಾಮರ್ಥ್ಯ ಶಾಕಿನಿಯಾಗದಂತೆ ನೋಡಿಕೊಳ್ಳಲು ಸಾಹಿತ್ಯದ ವ್ಯಕ್ತಿನಿರಪೇಕ್ಷ ಶಕ್ತಿ (Impersonal authority) ಅತ್ಯಾವಶ್ಯಕವಾದುದು. ಶಕ್ತಿಯೂ ಶಿವನೂ ಅಗಲಿದಾಗ ತಾರಕಾಸುರನ ಉಪಟಳ ಉರಿವಣಿಗೆಗಳಿಗೆ ತುದಿಮೊದಲಿಲ್ಲದಂತಾಗುತ್ತದೆಯೆಂಬುದನ್ನು ನಾವು ಹರಿಹರನ ಗಿರಿಜಾ ಕಲ್ಯಾಣದಲ್ಲಿ ನೋಡಿದ್ದೇವೆ. ಕೊನೆಗೆ ಶಕ್ತಿ – ಶಿವ-ಸಂಯೋಗದಿಂದ ಸಂಭವಿಸಿದ ಕುಮಾರ ಸ್ವಾಮಿಯಿಂದಲೇ ತಾರಕಾಹಂಕಾರ ಸಂಹಾರವಾದುದನ್ನೂ ನೋಡಿದ್ದೇವೆ. ಆದುದರಿಂದ ರಾಜ್ಯಪಾಲಕರ, ವಿಜ್ಞಾನಿಗಳ, ಯೋಧರ ಶಕ್ತಿಗೆ ಶಿವದ ಸಂಬಂಧ ಮಾಡಿಸುವ ಸಾಹಿತ್ಯವು ಸಂಪಾದನೀಯವಲ್ಲವೆಂದು ತಿಳಿದಿರುವವರಿಗೆ ವಿವೇಕ ಸಾಲದೆಂದು ವಿಧಿಯಿಲ್ಲದೆ ಹೇಳಬೇಕಾಗುತ್ತದೆ. "ತನ್ನಲ್ಲಿ ಭಾವಚರವಾಗುವ ನಿತ್ಯ ಸತ್ಯ ಮತ್ತು ಶಿವ ಶಕ್ತಿಗಳನ್ನು ರಸಾನುಭವವಾಗಿ ಪರಿವರ್ತಿಸಿ ಸಾಮಾನ್ಯರಿಗೆ ಆ ಅನುಭವವನ್ನು ದಾನ ಮಾಡುತ್ತದೆ ಸಾಹಿತ್ಯ." – (ರಸಋಷಿ ಕುವೆಂಪು.)

ಸಾಹಿತ್ಯವು ನಮ್ಮನ್ನು ಅನ್ನಮಯದಿಂದ ಆನಂದಮಯಕ್ಕೆ ಕರೆದೊಯ್ಯುವ ದಿವ್ಯ ಧ್ವನಿ. ಈಗ ಅನ್ನಮಯವೇ ಬರಿದಾಗಿ ಉರಿಯುತ್ತಲಿದೆ – ಆನಂದಮಯಕ್ಕೇರುವೆನೆಂಬ ಮಾತು ಗಾಳಿಗೋಪುರವೆನ್ನುವವರೂ ಇದ್ದಾರೆ. ಅದರಲ್ಲಿ ನಿಜಾಂಶವಿಲ್ಲದೆ ಇಲ್ಲ. "ಬಡತನ ನನಗಿರಲಿ ಭಾಳ ಮಕ್ಕ



ಳಿರಲಿ," ಎಂದು ಕನ್ನಡ ನಾಡಿನ ಗರತಿ ಹಾಡಿದರೇನಾಯಿತು– ಇಂದು ನೂರಕ್ಕೆ ತೊಂಬತ್ತು ಜನರಿಗೆ ಹಿಗ್ಗಿನ ಬುಗ್ಗೆಯಾಗಬೇಕಾಗಿದ್ದ ಹೊಟ್ಟೆಯ ಮಕ್ಕಳೇ ಹೊರಲಾಗದ ಹೊರೆಯಾಗಿ ಕುಳಿತಿವೆ! ಮೊದಲು ಐಹಿಕ ಜೀವನದಲ್ಲಿ ಆಸಕ್ತಿ ಹೆಚ್ಚಾದ ಕಾರಣ ಅದನ್ನು ಪಾರಲೌಕಿಕ-ದತ್ತ ತಿರುಗಿಸಲು ವೈರಾಗ್ಯಪರ ಸಾಹಿತ್ಯ ಬೇಕಾಯಿತು. ಈಗ ಸುಳ್ಳು ವೈರಾಗ್ಯವೇ ಸುತ್ತಲೂ ಕುಣಿಯುತ್ತಿದೆಯಾಗಿ ಜೀವನದಲ್ಲಿ, ಜಗತ್ತಿನಲ್ಲಿ ಆಸಕ್ತಿ ಹುಟ್ಟಿಸುವ ಸಾಹಿತ್ಯ ಬರೆಯಬೇಕಾಗಿ ಬಂದಿದೆ! ಇಲ್ಲವೆ "ಸುಖವೀಯದ ಈ ಸಮಾಜವನ್ನು ಸುಟ್ಟುಬಿಡು!" ಎಂಬ ವಿದ್ರೋಹಪ್ರವೃತ್ತಿ ಹಡೆಯೆತ್ತುತ್ತಲಿದೆ! ನಿಜವಾಗಿ ನೋಡದರೆ ಇದು ನಮ್ಮ ಅವಿವೇಕಪರ ಆತ್ಯಾಶೆಗಳು ಅನಿವಾರ್ಯವಾಗಿಯೇ ಅಪೂರ್ಣವಾಗಿ ಉಳಿದುದರ ಪ್ರತಿಕ್ರಿಯೆ! ಬೆಟ್ಟದಂಥ ಆಸೆಗಳನ್ನಿಟ್ಟುಕೊಳ್ಳುವುದು– ಅವುಗಳ ಪ್ರಾಪ್ತಿಗಾಗಿ ಪುರುಷೋಚಿತವಾಗಿ ಪ್ರಯತ್ನಿಸುವ ಸಾಮರ್ಥ್ಯವಿಲ್ಲದೆ, ಸ್ಥೈರ್ಯವಿಲ್ಲದೆ, ಗಂಡುತನವಿಲ್ಲದೆ ನಿರಾಶರಾಗಿ ಅವರಿವರ ಮೇಲೆ ಹರಿಹಾಯುತ್ತ ದೈವವನ್ನೋ, ಪ್ರತಿಕೂಲ ಪರಿಸ್ಥಿತಿಯನ್ನೋ– ಕೊನೆಗೆ ಸ್ವಾತಂತ್ರ್ಯವನ್ನೇ – ಶಪಿಸುತ್ತ ಕುಳಿತುಕೊಳ್ಳುವುದು! ಸ್ವರಾಜ್ಯ ಮಂದಿರದಲ್ಲಿಯೂ ಪ್ರತಿಕೂಲ ಪರಿಸ್ಥಿತಿಯ ಪ್ರಲಾಪವೆ? ಮನುಷ್ಯನು ಪರಿಸ್ಥಿತಿಯ ದಾಸನಲ್ಲ– ಮನಸ್ಸಿನ ದಾಸನಾಗಿದ್ದಾನೆ! ಈ ಮನಸ್ಸಿನ ದಾಸ್ಯದಲ್ಲಿಯೇ ಅವನ ನೈರಾಶ್ಯದ ಉಗಮಸ್ಥಾನವಿದೆ! ಮನಸ್ಸಿನ ದಾಸ್ಯದ ಸಂಕೋಲೆಗಳನ್ನು ಕತ್ತರಿಸಿ ಪ್ರತಿಕೂಲ ಪರಿಸ್ಥಿತಿಯ ಮೇಲೆ ವಿಜಯ ಪಡೆಯುವ ಗಂಡುತನ ಬರುವುದು ಸಾಹಿತ್ಯ ಸಂಪಾದನೆಯಿಂದಲೇ! "ಮನುಷ್ಯನನ್ನು ಸಾಮಾನ್ಯ ಸ್ಥಿತಿಯಿಂದ ಮೇಲಕ್ಕೆತ್ತಿ, ಅವನು ಪರಿಸ್ಥಿತಿಯ ಅಪಮಾನಕಾರಕ ಗುಲಾಮಗಿರಿಯಿಂದ ಮೇಲೆದ್ದು ಸ್ವತಂತ್ರ ಜೀವನದ ಕರ್ತಾರನಾಗಬಲ್ಲನೆಂಬುದನ್ನು ಸಾಹಿತ್ಯವೇ ಸಮರ್ಥಿಸುತ್ತದೆ."–(ಮಾಕ್ಸಿಂ ಗಾರ್ಕಿ.)

ಸಾಹಿತ್ಯವು ಜನಾಂಗ ಹೃದಯದ ಮಹಾದ್ವಾರ – ಹೃದಯವು ಸಾಹಿತ್ಯದ ಗರ್ಭಗುಡಿ. ಸದಯ ಹೃದಯವೇ ಸ್ವರ್ಗ– ಅದಯ ಹೃದಯವೇ ನರಕ! "ಸ ಯಥಾ ಸರ್ವಾಸಾಮಪಾಂ ಸಮುದ್ರ ಏಕಾಯತನಮ್। ಏವಂ

ಸರ್ವೇಷಾಂ ವಿದ್ಯಾನಾಂ ಹೃದಯಮೇಕಾಯತನಮ್,"–(ಬೃಹದಾರಣ್ಯಕ.) ಆದರೆ ಹೃದಯದಲ್ಲಿ ಅಮೃತವೂ ಇದೆ, ಹಾಲಾಹಲವೂ ಇದೆ. ಸಾಹಿತ್ಯ ಹೃದಯದ ಹಾಲಾಹಲವನ್ನೂ ಹೀರುತ್ತದೆ-ಹರನಂತೆ; ಅದರ ಅಮೃತವನ್ನೂ ಹಂಚುತ್ತದೆ – ಮೋಹಿನೀ ರೂಪದ ಹರಿಯಂತೆ. ನಮ್ಮ ಹೃದಯದಲ್ಲಿಯೇ ಅಮೃತವಿದ್ದರೂ ಅದು ನಮಗೆ ದೊರಕುವುದು ಸಾಹಿತ್ಯದ ಮೂಲಕವೇ. ಆಕಳ ಕೆಚ್ಚಲಲ್ಲಿ ಹಾಲೂ,ಆ ಹಾಲಿನಲ್ಲಿ ತುಪ್ಪವೂ ಅಡಕವಾಗಿದ್ದು ಆಕಳ ಗಾಯಕ್ಕೆ ಆ ತುಪ್ಪವೇ ಔಷಧವಾಗಿದ್ದರೂ ಅದನ್ನು ಹೊರಡೆಗೆದು ಹಚ್ಚುವವ-ದಿದ್ದರೆ ಆ ಗಾಯ ಮಾಯದು. ಕಟ್ಟಿಗೆಯಲ್ಲಿ ಬೆಂಕಿ ಅಡಗಿದೆಯೆಂಬ ಮಾತ್ರಕ್ಕೆ ಒಣ ಕಟ್ಟಿಗೆಯಿಂದಲೇ ಅಡುಗೆಯಾಗದು. ಅರಮರ ಮಥಿಸಿಸದೆ ಅಗ್ನಿ ಹುಟ್ಟದು; ಅಡುಗೆಯಾಗದು. ಹಾಗೆಯೇ ನಮ್ಮ ಹೃದಯದಲ್ಲಿಯೇ ಇರುವ ಅಮೃತ ನಮಗೆ ಒದಗಬೇಕಾದರೆ ಹೃದಯ ಮಥನವೇ ಹಾದಿ. ಸಾಹಿತ್ಯವು ಅದನ್ನೇ ಮಾಡುತ್ತದೆ. ಸಾಹಿತಿಯ ಹೃದಯದಲ್ಲಿ ಅವನ ಸುತ್ತುಮುತ್ತಲಿನ ಸಹಸ್ರಾವಧಿ ಹೃದಯಗಳ ಸಹೃದಯೀಕರಣವೂ, ಮಂಥನವೂ ಆಗಿ ಅಮೃತ ಹುಟ್ಟಿ ಮೃತಸಂಜೀವಿನಿಯಾಗುತ್ತದೆ. ಅದನ್ನು ಕುಡಿದ ಮಾನವ ಮೃತ್ಯುಂಜಯನಾಗುತ್ತಾನೆ ಈ ಅಮೃತ ಬೇಕಾದರೆ ಸಾಹಿತ್ಯ ಸಂಪಾದನೆಯೇ ಮಾರ್ಗ. ಗೀತೆಯ "ಸರ್ವಭೂತಸ್ಥಮಾತ್ಮಾನಂ, ಸರ್ವ ಭೂತಾನಿಚಾತ್ಮನಿ"– ಇದೇ ಆ ಮಾರ್ಗ.

ವ್ಯಾಪಾರವು ವಣಿಕನಾಗೆಂದು ಹೇಳುತ್ತದೆ; ರಾಜ್ಯವು ರಕ್ಷಕನಾಗೆಂದು ಹೇಳುತ್ತದೆ; ಸಾಮ್ರಾಜ್ಯವು ಶೋಷಕನಾಗೆಂದು ಹೇಳುತ್ತದೆ; ವಿಜ್ಞಾನವು ಶೋಧಕನಾಗೆಂದು ಹೇಳುತ್ತದೆ; ಧರ್ಮವು ಬೋಧಕನಾಗೆಂದು ಹೇಳುತ್ತದೆ; ಮನೋವಿಜ್ಞಾನವು ವಿಶ್ಲೇಷಕನಾಗೆಂದು ಹೇಳುತ್ತದೆ; ಭೋಗವು ಚಾರ್ವಾಕನಾಗೆಂದು ಹೇಳುತ್ತದೆ; ಯಾವುದು ಏನೇ ಹೇಳಿದರೂ ಸಾಹಿತ್ಯ ಮಾತ್ರ ರಸಿಕನಾಗೆಂದು ಹೇಳುತ್ತದೆ. ಬದುಕಿನ ಬೇಸರವನ್ನು–ಬದುಕಿನಲ್ಲಿ ಒಮ್ಮೆಯೂ ಬೇಸರ ಹುಟ್ಟದವರಾರು?– ಕಳೆದು ಬಾಳಿಗೆ ಬಣ್ಣವನ್ನೂ, ಬೆಡಗನ್ನೂ, ನೂತನತೆಯನ್ನೂ, ಮೋಹಕತೆಯನ್ನೂ, ಮಾಧುರ್ಯವನ್ನೂ, ಸೌಂದರ್ಯವನ್ನೂ, ಅರ್ಥವನ್ನೂ, ಸಾರ್ಥಕತೆಯನ್ನೂ, ಉದ್ದೇಶ



ವನ್ನೂ ಉದ್ದೀಪನವನ್ನೂ, ರುಚಿಯನ್ನೂ ಶುಚಿಯನ್ನೂ, ಸಮತೆಯನ್ನೂ ಕ್ಷಮತೆಯನ್ನೂ, ಹುರುಳನ್ನೂ ತಿರುಳನ್ನೂ ತಂದುಕೊಡುವುದು ಇದೇ ರಸಿಕತೆಯೇ. ಇದೊಂದಿಲ್ಲದಿದ್ದರೆ ನಾವೂ ಬಾಲವಿಲ್ಲದ ದ್ವಿಪಾದ ಪಶುಗಳೇ! ರಸಿಕನಾಗಬೇಕೆನ್ನುವವನು, ತುಂಬು ಬಾಳನ್ನು ಬಾಳಿ ಜೀವನದ ಮಾಧುರ್ಯವನ್ನು ಕಬ್ಬಿನ ಹೊರಗಣೆಲೆಯನೆ ಮೇದು ಸಂತೃಪ್ತ ಅಲ್ಪ ಸುಖಕ್ಕೆ ಸೋಲುವ ಕುರಿಯಂತೆ ಅಲ್ಲ, ಕಬ್ಬಿನೊಳಗಣ ರಸವ ನೆರೆಸವಿವ ಮದಗಜದಂತೆ ಸವಿಯಬೇಕೆನ್ನುವ ಮದಗಜಮಲ್ಲರು ಸಾಹಿತ್ಯ ಸಂಪಾದನೆ ಮಾಡಲೇ ಬೇಕು.

ಬಾಳು ಬೇಸರವಾಗುವುದಕ್ಕೆ ಇನ್ನೊಂದು ಕಾರಣವನ್ನು ಹೇಳುತ್ತಾರೆ: 'ಅತಿ ಪರಿಚಯದಿಂದ ಅವಜ್ಞೆ' ಎಂಬುದೇ ಅದು. ಕೂಸು ಹುಟ್ಟಿ ಬೆಳೆಯು-ವಾಗ ಆನಂದಕವಾಗಿರುತ್ತದೆ. ಕೈಗೆ ಏನೇ ಸಿಕ್ಕರೂ ನೋಡಿ ಆಡಿ ನಲವಾಂತು ತನ್ನನ್ನು ನೋಡಿದವರಿಗೆಲ್ಲ ತನ್ನ ತಲ್ಲೀನತೆ, ಆನಂದಮಯತೆ ಆಹ್ಲಾದಕರತೆಗಳ ವರದಾನವನ್ನು ಮಾಡುತ್ತದೆ. ಏಕೆ? ಅದರ ವಿಸ್ಮಯ ಭಾವ, ಆಶ್ಚರ್ಯಭಾವ, ಕುತೂಹಲ, ಸೋಜಿಗ, ಕೌತುಕಭಾವ (Sense of wonder) ಇನ್ನೂ ಜಾಗ್ರತವಾಗಿರುತ್ತದೆ. ಅಂತೆಯೇ ಅದಕ್ಕೆ ಜಗತ್ತಿನ ಪ್ರತಿಯೊಂದು ವಸ್ತುವೂ ಹೊಚ್ಚ ಹೊಸದಾಗಿ, ಕುತೂಹಲಜನಕವಾಗಿ, ಚಿತ್ರ-ವಿಚಿತ್ರವಾಗಿ ಕಂಡು ಆನಂದವೀಯುತ್ತದೆ. ಆದರೆ ಮನುಷ್ಯ ಬೆಳೆದಂತೆಲ್ಲ ಜಗತ್ತೂ ಜೀವನವೂ ಅವನ ಪಾಲಿಗೆ ಹಳೆಯ-ವಾಗುತ್ತ ಹೋಗುತ್ತವೆ; ಅವುಗಳ ಅತಿಪರಿಚಯದಿಂದ ಅವುಗಳ ಬಗ್ಗೆ ಅವಜ್ಞೆ, ತಾತ್ಸಾರ, ಬೇಸರ ಬೆಳೆಯುತ್ತ ಹೋಗುತ್ತವೆ. ತತ್ಪರಿಣಾಮವಾಗಿ ಬದುಕಿನಲ್ಲಿ ಹಿಗ್ಗಿನ ಸೆಲೆ ಒತ್ತಿ 'O world! O life!' ಎಂಬ ನಿರಾಶಾವಾದ ತಲೆಯೆತ್ತುತ್ತದೆ. ಸಾಹಿತ್ಯವು ಶೆಲ್ಲಿಯು ಹೇಳುವಂತೆ-ಜಗತ್ತು ಜೀವನಗಳ ಚೆಲುವುಗಳ ಮೇಲೆ ಕಾಲಕ್ರಮದಲ್ಲಿ ಕವಿಯುವ ಕಾಡಿಗೆಯನ್ನು ಕಳೆದು, ಮೇಲಿನ ಮುಸುಕನ್ನೆತ್ತಿ, ಅವುಗಳ ಅನಾಚ್ಛಾದಿತವಾದ ಅಮರ ಸೌಂದರ್ಯದ ದರ್ಶನ ನಮಗೆ ಮಾಡಿಸಿ, ಜಗತ್ತು ಮತ್ತು ಜೀವನಗಳು ಮತ್ತೆ ಮೋಹಕ, ಆಕರ್ಷಕ, ಆಹ್ಲಾದಕರಗಳಾಗುವಂತೆ ಮಾಡುತ್ತದೆ;

ಜಗತ್ತು ಜೀವನಗಳಲ್ಲಿರುವ ಸಾಮಾನ್ಯದ ಹಿಂದಿರುವ ಅಸಾಮಾನ್ಯದ ದರ್ಶನ ಮಾಡಿಸಿ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುತ್ತದೆ; ಅಸಾಮಾನ್ಯದ ಹಿಂದಿನ ಸಾಮಾನ್ಯದ ದರ್ಶನ ಮಾಡಿಸಿ ದೇವತೆಗಳನ್ನು ಮನುಷ್ಯರನ್ನಾಗಿ ಮಾರ್ಪಡಿಸುತ್ತದೆ! ಇಂಥ ಸಾಹಿತ್ಯ ಯಾರಿಗೆ ಬೇಡ? ಜಗತ್ತು ಜೀವನ ಬೇಡಾಗಿ, ಬೇಸರವಾಗಿರುವವರಿಗಂತೂ ಮೊದಲು ಬೇಕು ಸಾಹಿತ್ಯ.

ಮನುಷ್ಯನಲ್ಲಿ ಮೂರು-ನಾಲ್ಕನೆಯ ಅಂಶ ಪ್ರಾಣಾಸುರನ ವಿಕಟಾಟ್ಟಹಾಸ. ಆ ವಿಕಾರಗಳ ಎಳೆತಕ್ಕೆ, ಸೆಳೆತಕ್ಕೆ ಸಿಕ್ಕೇ ನಂದನವನವಾಗಬೇಕಾಗಿದ್ದ ಜಗತ್ತು ರುದ್ರಭೂಮಿಯಾಗಿದೆ. ಜಗದಾದಿಯಿಂದಲೂ ಈ ವಿಕಾರ ಮತ್ತು ಸಂಸ್ಕಾರಗಳ ನಡುವೆ ಧರ್ಮಯುದ್ಧ ನಡೆಯುತ್ತಲೇ ಬಂದಿದೆ. ಕುರುಕ್ಷೇತ್ರದಲ್ಲಿ ಗೀತಾಚಾರ್ಯನ ಸಮ್ಮುಖದಲ್ಲಿ ಅರ್ಜುನನ ಚಿತ್ತರಂಗದ ಮೇಲೆ ನಡೆದಂತೆ. ಆದರೂ ರಕ್ತ-ಬೀಜನ ಸಂತತಿಯಂತೆ ಕಡಿದಷ್ಟು ಕೊನರುವ ವಿಕಾರಗಳ, ವಾಸನೆಗಳ, ಲೋಭ ಲಾಲಸೆಗಳ, ವಿಷಯ ವ್ಯಾಮೋಹಗಳ ಪೂತನಿಯ ಪೀಳಿಗೆ ಮಾನವನಿಗೆ ನಂಜಿಕ್ಕಿದ ಮೊಲೆವಾಲನ್ನೂಡಿಯೇ ಕೊಲ್ಲಲೆಳಸುತ್ತಿದೆ. ಜೀವರಥೋತ್ಸವದಲ್ಲಿ ಪಾರ್ಥಸಾರಥಿಯಾದ ಸಾಹಿತ್ಯವು ಶ್ರೀಕೃಷ್ಣನಂತೆ ಆ ಪೂತನಿಯ ಪ್ರಾಣಗಳನ್ನೇ ಹೀರಿ ರಸಮಾಡಿ ವಿಷವಿಕ್ಕಿದವಳಿಗೇ ವಿವೇಕೋದಯ ಮಾಡಿಸುತ್ತದೆ. ವಿಕಾರಗಳನ್ನು ದಮನದಿಂದಲ್ಲ, ಶಮನದಿಂದಲ್ಲ, ಹನನದಿಂದಲ್ಲ, ಆಚ್ಛಾದನದಿಂದಲೂ ಅಲ್ಲ – ಉದಾತ್ತೀಕರಣದಿಂದಲೇ ವಶಪಡಿಸಿಕೊಳ್ಳಿರೆಂದು ಸಾಹಿತ್ಯವು ಸಾರುತ್ತದೆ. ಈಪ್ಸಿತಗಳು, ಆಸೆಗಳು, ಅಭಿಲಾಷೆಗಳು ಲಾಲಸೆಗಳು, ವಾಸನೆಗಳು, ಕಾಮನೆಗಳು ಜೀವನ ವೃಕ್ಷಕ್ಕೇ ಒಡೆದ ಶಾಖೋಪಶಾಖೆಗಳು. ಶಾಖೆಗಳನ್ನೆಲ್ಲ ಸವರಿ ಒಗೆದರೆ ಉಳಿಯುವುದು ಮೋಟು ಕೊರಡು! ಉಪಾಯವಾವುದು ಹಾಗಾದರೆ? ವಿಕಾರಗಳ ಉದಾತ್ತೀಕರಣವೇ ಉಪಾಯ. "ಹಾರೈಸು, ಹಾರೈಸು, ಹಾರೈಸು ಜೀವ!" ಎಂದೇ ಹೇಳುತ್ತದೆ ಸಾಹಿತ್ಯ. ಆದರೆ ಏನನ್ನು ಹಾರೈಸೆಂದು ಹೇಳುತ್ತದೆ? "ಹಾರೈಸು ನೀನಾಗುವನ್ನೆಗಂ ದೇವ!" ಎಂದೇ ಅಲ್ಲವೆ? ಅಕ್ಕನ ಅಮೃತ ವಾಣಿಯನ್ನು ಆಲಿಸಿರಿ. "ಗಿರಿಯಲ್ಲದೆ ಹುಲ್ಲು ಮುರಡಿಯಲ್ಲಾಡುವುದೆ ನವಿಲು? ಕೊಳನಲ್ಲದೆ ಕಿರಿವಳ್ಳಕ್ಕೆಳಸುವುದೆ



ಹಂಸೆ? ಕಳಿತ ಫಲವಲ್ಲದೆ ಕಸುಗಾಯಿಗೆಳಸುವುದೆ ಗಿಳಿ? ಚೆನ್ನಮಲ್ಲಿಕಾರ್ಜುನನಲ್ಲದೆ ಅನ್ಯ ವಿಷಯಕ್ಕೆಳಸುವುದೆ ಎನ್ನ ಮನ?"

ಬಯಸುವುದು ಜೀವ ಗುಣ : ಬಯಸಲಿ! ಆದರೆ ಉದಾತ್ತವಾದುದನ್ನು, ಉನ್ನತವಾದುದನ್ನು, ಒಳ್ಳಿತಾದುದನ್ನು, ವಿಶುದ್ಧವಾದುದನ್ನು, ವಿವೇಕಯುಕ್ತವಾದುದನ್ನು, ಹಿತವಾದುದನ್ನು, ಋತವಾದುದನ್ನು, ಶಿವವಾದುದನ್ನು, ಸುಂದರವಾದುದನ್ನು, ಭದ್ರ ಶುಭ ಮಂಗಲವಾದುದನ್ನು, ಅಭ್ಯುದಯ ನಿಃಶ್ರೇಯಸಕರವಾದುದನ್ನು ಅರಸು, ಅಪೇಕ್ಷಿಸು, ಅಳವಡಿಸಿಕೊ, ಆದರಿಸು, ಆಚರಿಸು, ಹಬ್ಬಿಸು, ಹರಡಿಸೆಂದು ಹೇಳುತ್ತದೆ ಸಾಹಿತ್ಯ. ಎಂತಲೇ ಸಾಹಿತ್ಯವನ್ನು 'ಉದಾತ್ತಭಾವಕ್ಕೇರಿದ ವಿಚಾರ ಶಕ್ತಿ' ಯೆಂದು ಕರೆದಿದ್ದಾನೆ ವರ್ಡ್ಸ್‌ವರ್ತ್. ಬರಿ ವಿಚಾರ ಶಕ್ತಿಯಲ್ಲಿ ಉದಾತ್ತೀಕರಣ ಹೊಂದಿ (Irradiated by imagination and sublimation) ಅಮೃತವಾದ, ಆನಂದ ರೂಪವಾದ, ಪ್ರಕಾಶವಾದ ವಿಚಾರಶಕ್ತಿ. "ಯದಾನಂದ ರೂಪಂ, ಅಮೃತಂ, ಪ್ರಕಾಶ ಸ್ವರೂಪಂ." ಈ ಆನಂದ, ಅಮೃತ, ಪ್ರಕಾಶ ಯಾರಿಗೆ ಬೇಡ? "ಸ್ವರ್ಗ ಪ್ರಕಾಶ ಇತ್ಯಾಹುಃ ನರಕಂ ತಮ ಏವಚ." ಅಂಥ ತಮಸ್ಸಿನಿಂದ ನರಕವಾಗಿರುವ ಈ ಲೋಕವನ್ನು ಪ್ರಕಾಶಮಾನವಾದ ಸ್ವರ್ಗವನ್ನಾಗಿ, ಜ್ಯೋತಿರ್ಲೋಕವನ್ನಾಗಿ ಮಾರ್ಪಡಿಸಲು ಹವಣಿಸುವ ಹೆಣಗುವ, ಹೋರಾಡುವ ಸಾಹಿತ್ಯ ಸಂಪಾದನೀಯವಲ್ಲವೆ?

ವಿಕಾರಗಳನ್ನೇ ಅಮೃತ ಮಾಡಿ ಕರ್ತಾರನ ಕಮ್ಮಟವಾದ ಮರ್ತ್ಯಲೋಕವನ್ನೇ ದೇವಲೋಕವನ್ನಾಗಿ ಮಾಡುವುದು ಶೀಲ ಬಲವಿಲ್ಲದಿದ್ದರೆ ಹೇಗೆ ಸಾಧ್ಯ? ಶೀಲವೇ ಸಕಲ ಶ್ರೇಯಸ್ಸಿಗೂ ಮೂಲ. ಭೀಷ್ಮಾಚಾರ್ಯರು ಹೇಳುವಂತೆ ಶೀಲದಿಂದಲೇ ಧರ್ಮ, ಸತ್ಯ, ಬಲ, ಸಂಪತ್ತು–ಎಲ್ಲ. ಷೇಕ್ಸಪಿಯರನಂತೂ "ಶೀಲವೇ ದೈವ" ಎನ್ನುತ್ತಾನೆ. 'ಶೀಲ ಹೋದರೆ ಎಲ್ಲ ಹೋದಂತೆ' ಎಂಬ ನಾಣ್ಣುಡಿಯೂ ಇದನ್ನೇ ಸಾರುತ್ತದೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ–ಇವು 'ಯಮ'; ಶೌಚ, ಸಂತೃಪ್ತಿ, ತಪಸ್ಸು, ಅಧ್ಯಯನ, ಈಶ್ವರ ಧ್ಯಾನ–ಇವು 'ನಿಯಮ'. ಇವೆಲ್ಲ

'ಶೀಲ'ವೆಂಬ ಒಂದೇ ಮಾತಿನಲ್ಲಿ ಅಡಕವಾಗಿವೆ. ಅಂತೆಯೇ "ಶೀಲವಂತರಾಗಿ ಬಾಳಿರಿ" ಎಂದೇ ಸಾಹಿತ್ಯವೂ ಸಾರುತ್ತದೆ. ಶೀಲ ಸಂಪಾದನೆ ಸಾಹಿತ್ಯ ಸಂಪಾದನೆಗಳು ಪರ್ಯಾಯ ಪದಗಳು. ಶೀಲದ ಸ್ವರೂಪ ನಿರ್ಣಯ, ಶೀಲ ಸಂಪಾದನೆಯ ದಿಶಾದರ್ಶನ ಮಾರ್ಗದರ್ಶನಗಳೇ ಸಾಹಿತ್ಯ ಸೃಷ್ಟಿಯ ಮೂಲೋದ್ದೇಶ. ಕಾರಣ ಶೀಲ ಸಂಪಾದನೆಗಾಗಿಯಾದರೂ ಸಾಹಿತ್ಯ ಸಂಪಾದನೆ ನಡೆಯಲೇಬೇಕು.

ಲೋಕ ವ್ಯವಹಾರಗಳ ಕಠಿನತೆ, ಕಾರ್ಪಣ್ಯ, ಕ್ಲೈಬ್ಯಗಳು ಹಿಂಗಡಿಸಿದುದನ್ನು ಸಾಹಿತ್ಯವು ಸಂಗಡಿಸುತ್ತದೆ; ಒಂದುಗೂಡಿಸುತ್ತದೆ. ವರ್ಣ, ವಂಶ, ರಾಜ್ಯ, ಧರ್ಮ, ಕುಲ, ಜಾತಿ, ಪಕ್ಷ, ಪಂಥಗಳೆಂದು ಹೋಳು ಹೋಳಾಗಿರುವ ಮಾನವತೆ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ದ್ವೇಷಾಸೂಯೆಗಳನ್ನು ಮರೆತು, ಒಂದೇ ಸಹೃದಯತೆಯಲ್ಲಿ ಒಂದುಗೂಡಿ, ವಿಶ್ವದ ಸಮಸ್ತ ಸಾಹಿತ್ಯದ ಸ್ವಾದ ಸವಿಯುತ್ತದೆ. ಇದಕ್ಕೆ ಕಾರಣ ಸಾಹಿತ್ಯ ಮಾನವೀಕರಣ ಶಕ್ತಿ. ಮಾನವೀಯತೆಯೇ ಸಾಹಿತ್ಯ. ಅಣುವಿನಿಂದ ಆಕಾಶದವರೆಗೆ ಎಲ್ಲ ವಸ್ತುಗಳ ಉಪಯುಕ್ತ ಅನುಪಯುಕ್ತ-ತಾರಕ ಮಾರಕ ಜ್ಞಾನವೂ ಸಂಪಾದನೀಯವೆನಿಸಿದ ಈ ಜ್ಞಾನ-ವಿಜ್ಞಾನ ಯುಗದಲ್ಲಿಮಾನವೀಯತೆಯ ಸಾರಭೂತವಾದ ಸಾಹಿತ್ಯವೇ ಸಂಪಾದನೀಯವೆನಿಸದಿರುವುದು ಈ ಯುಗದ ಆಶ್ಚರ್ಯಗಳಲ್ಲಿ ಒಂದು, ಒಗಟುಗಳಲ್ಲಿ ಒಂದು, ವಿರೋಧಾಭಾಸಗಳಲ್ಲಿ ಒಂದು. ಸಾಹಿತ್ಯದ ದೃಷ್ಟಿಯಲ್ಲಿ ಮಾನವತೆಯೇ ದೇವರು-ಮನುಜ ಸೇವೆಯೇ ಧರ್ಮ. ಅಂತೆಯೇ ಆಂಗ್ಲರ ಷೇಕ್ಸಪಿಯರ್ ಭಾರತಕ್ಕೂ ಬೇಕು, ರಷ್ಯಾಕ್ಕೂ ಬೇಕು, ನಮ್ಮ ಕಾಳಿದಾಸ ಪೌರ್ವಾತ್ಯರಿಗೂ ಬೇಕು, ಪಾಶ್ಚಿಮಾತ್ಯರಿಗೂ ಬೇಕು. ಸಂಯುಕ್ತ ರಾಷ್ಟ್ರ ಸಂಘವು ವಿಶ್ವವನ್ನು ಒಂದುಗೂಡಿಸಲು ಹೊರಟಿದೆ; ಆದರೆ ಇನ್ನೂ ಒಂದುಗೂಡಿಸಿಲ್ಲ; ವಿಭಾಗಿಸಿದೆ. ಆದರೆ ಸಾಹಿತ್ಯ ಹೇಳದೆ ಆ ಕಾರ್ಯ ಮಾಡುತ್ತಿದೆ. 'ಯುನೋ'ಕ್ಕೆ ಸಿಗದ ಸಫಲತೆ 'ಯುನೆಸ್ಕೋ'ಕ್ಕೆ ಸಿಗುತ್ತಲಿರುವುದೇ ಸಾಕ್ಷಿ ಇದಕ್ಕೆ. ಹೆಣ್ಣು ಹೇಳದೆ ಧರ್ಮವನ್ನು ಕಲಿಸುವ ಗುರುವಾದರೆ ಕಾಂತಾ ಸಮ್ಮಿತಿಯಾದ ಸಾಹಿತ್ಯವೂ ಹೇಳದೆ ಧರ್ಮವನ್ನು ಕಲಿಸುವ ಗುರುವೆಂದು ಹೇಳಬಹುದು



ಇಲ್ಲಿ ಆನುಷಂಗಿಕವಾಗಿ ಒಂದು ಎಚ್ಚರಿಕೆಯ ಮಾತನ್ನಾಡುವುದು ಕರ್ತವ್ಯವಾಗುತ್ತದೆ. ಸಾಹಿತ್ಯದಲ್ಲಿಯೂ ತಳವನ್ನು ಕಲಕಿ ಒಂಡನ್ನೆಬ್ಬಿಸಿ ತಿಳಿ ನೀರನ್ನು ಕೊಳೆನೀರನ್ನಾಗಿ ಮಾಡುವ ಪ್ರವೃತ್ತಿ ಇತಿಹಾಸ ಸಂಶೋಧನೆಯ, ವಿಮರ್ಶೆಯ, ಸತ್ಯಾನ್ವೇಷಣೆಯ ಸೋಗು ಹಾಕಿ ಆಗಾಗ ಅಲ್ಲಲ್ಲಿ ಕಾಲಿಡುವುದುಂಟು. ಇಂಥ ಕಾರ್ಯಕ್ಕೆ ಸಾಹಿತ್ಯ ಧರ್ಮದ ದೃಷ್ಟಿಯಲ್ಲಿ ದ್ರೋಹವೆನ್ನಬೇಕಾಗುತ್ತದೆ. ನಿತ್ಯವೂ ನಮ್ಮೆದೆಯ ನಂಜನೀಂಟುವ ನೀಲಕಂಠನಾಗಬೇಕಾದ, ಜಾತಿಜಾತಿಗಳಲ್ಲಿ ಸೇತುಬಂಧನ ಗೈವ ಶ್ರೀರಾಮನಾಗಬೇಕಾದ ಸಾಹಿತ್ಯ ಇವರ ಕೈಯ್ಯಲ್ಲಿ-ಕಲ್ಲಾಗಿ ಬಿದ್ದಿರುವ ಮಾನವತೆಯ ಅಹಲ್ಯೆಯನ್ನು ಉದ್ಧರಿಸಬಲ್ಲ ರಾಮಪಾದವಾಗದೆ ಮತಮತಗಳಲ್ಲಿ, ವ್ಯಕ್ತಿ ವ್ಯಕ್ತಿಗಳಲ್ಲಿ ದ್ವೇಷಜ್ವಾಲೆಯನ್ನು ಹುಟ್ಟಿಸುವ ಕಲಹ ಕುಂಭಕರ್ಣನನ್ನೆಬ್ಬಿಸುವ ರಾಕ್ಷಸಾಯುಧವಾಗುತ್ತದೆ! ಯಾವ ಸಂಗತಿಯ ಶೋಧವಾಗುವುದರಿಂದ ಸಮಾಜದಲ್ಲಿ ನೆಲೆಸಿರುವ ಸಹೋದರತೆ ಸೌಹಾರ್ದ್ರ ಭಾವಗಳಿಗೆ ಕೊಡಲಿಯ ಪೆಟ್ಟು ಬೀಳುವ ಅಂಜಿಕೆಯಿದೆಯೋ ಆ ಸಂಗತಿ ಶೋಧವಾಗದಿರುವುದೇ ಮೇಲು! ಶೋಧವಾದರೂ ಪ್ರಕಟವಾಗದಿರಲಿ! ಸ್ಪಾರ್ಟನರಲ್ಲಿ ವಿಕಲಾಂಗರೂ, ಸುಂಕುರೋಗಿಗಳೂ ಆದ ಕೂಸುಗಳು ಹುಟ್ಟಿದರೆ ಅವು ಸಮಾಜ ಸ್ವಾಸ್ಥ್ಯಕ್ಕೆ ವೈರಿಗಳಾಗದಿರಲೆಂದು ಅವುಗಳನ್ನು ಹುಟ್ಟುತ್ತಲೇ ಕಡಲಿಗೆಸೆದು ಬಿಡುವ ಪರಿಪಾಠವಿದ್ದಿತಂತೆ! ಲೇಖನವ್ಯವಸಾಯದಲ್ಲಿರುವವರೂ ತಮ್ಮ ಲೇಖನಿಯಿಂದ ಸಮಾಜದಲ್ಲಿ ಕೋಲಾಹಲವನ್ನೂ ಕಳವಳವನ್ನೂ ದ್ವೇಷಾಸೂಯೆಗಳನ್ನೂ ಹುಟ್ಟಿಸುವ ಶನಿಸಂತಾನವೇನಾದರೂ ಹುಟ್ಟಿದರೆ ಅದನ್ನು ಹಿಂದೆ ಮುಂದೆ ನೋಡದೆ ಹಿಂದೂ ಮಹಾಸಾಗರಕ್ಕೆಸೆದು ಬಿಡುವ ಪರಿಪಾಠವನ್ನಿಟ್ಟುಕೊಳ್ಳಲಿ! ಕನ್ನಡ ಸಾಹಿತ್ಯದ ಪುನರುಜ್ಜೀವನ ಕಾರ್ಯದಲ್ಲಿ ಮುಂದಾಳುಗಳಾಗಿದ್ದ, ಆಗಿರುವ, ದಿವಂಗತ ಶ್ರೀಕಂಠಯ್ಯನವರೂ, ಬಸವನಾಳರೂ, ವೆಂಕಣ್ಣಯ್ಯನವರೂ ಶ್ರೀಗಳಾದ ಶ್ರೀನಿವಾಸರೂ, ಶ್ರೀನಿವಾಸಮೂರ್ತಿಗಳೂ, ಬೇಂದ್ರೆ, ಗೋಕಾಕರೂ, ಕುವೆಂಪು, ಕೃಷ್ಣಶಾಸ್ತ್ರಿಗಳೂ, ರಂಗನಾಥ ದಿವಾಕರರೂ, ರಾಜರತ್ನಂರೂ, ಭೀಮಸೇನರಾಯರೂ, ಮಾಸ್ತಿ ನರಸಿಂಗರಾಯರೂ ಅನ್ಯ ಮತೀಯರ ಸಾಹಿತ್ಯವನ್ನು ಆ ಮತೀಯರಿಗಿಂತಲೂ

ಹೆಚ್ಚು ಶ್ರದ್ಧೆ ವಿಶ್ವಾಸಗಳಿಂದ ಓದಿ ಅದರ ಸಾರಸಂಗ್ರಹವನ್ನು ಸಕಲರಿಗೆ ನೀಡುವ ಅನುಕರಣೀಯವಾದ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ. ಅದನ್ನು ಬಲಿಸಿ ಬೆಳೆಸುವುದೇ ಸಾಹಿತ್ಯ ಕರ್ಮಿಯ ಧರ್ಮ. ನಮ್ಮ ಸಾಹಿತ್ಯ ಪರಂಪರೆಯು ನಮ್ಮ ಮೇಲೆ ಹೊರಿಸಿರುವ ನೈತಿಕ ಹೊಣೆ, ಕರ್ತವ್ಯ, ಉತ್ತರದಾಯಿತ್ವವದು. ಜಾತೀಯತೆಯು ಇನ್ನೆಲ್ಲಿಯಾದರೂ ಬದುಕಿರಲೊಲ್ಲದೇಕೆ- ಸಾಹಿತ್ಯದಲ್ಲಿ ಮಾತ್ರ ಸರ್ವಥಾ, ಸರ್ವಥಾ ಆ ಪಿಶಾಚಿಯನ್ನು ತರಬೇಡಿರಿ, ತರಬೇಡಿರಿ, ತರಬೇಡಿರಿ! ಇದೇ ನನ್ನ ನಮ್ರ ಬಿನ್ನಹ, ಪ್ರಾರ್ಥನೆ, ಮೊರೆ ನಿಮಗೆ!

ವಿಶ್ವವಿಖ್ಯಾತ ದಾರ್ಶನಿಕನಾದ ಕಾಂಟ್ ಮೂರು ಮೂಲಭೂತ ಪ್ರಶ್ನೆಗಳನ್ನು ಕೇಳಿದ್ದಾನೆ: (೧) ನಾವು ಏನನ್ನು ತಿಳಿದುಕೊಳ್ಳಬಲ್ಲೆವು? (೨) ನಾವು ಏನು ಮಾಡಬೇಕು? (೩) ನಾವು ಏನನ್ನು ಆಶಿಸಬೇಕು? ಈ ಮೂರು ಪ್ರಶ್ನೆಗಳಲ್ಲಿ ಮಾನವನ ಮೂರು ಮುಖ್ಯ ಸಮಸ್ಯೆಗಳು ಅಡಕವಾಗಿವೆ. ಮೊದಲನೆಯ ಪ್ರಶ್ನೆಗೆ ಉತ್ತರವಾಗಿ—

ತಿಳಿಯುವುದೆ ಒಲಿಯುವುದು, ಒಲಿಯುವುದೆ ತಿಳಿಯುವುದು,
ಒಂದು ಹಿಡಿದರೆ ಸಾಕು, ಇನ್ನೊಂದು ದೊರೆಯುವುದು;

ತಿಳಿಯದಲೆ ಒಲವಿಲ್ಲ, ಒಲಿಯದಲೆ ತಿಳಿವಿಲ್ಲ,
ಒಂದು ಬಿಟ್ಟರೆ ಇನ್ನೊಂದು ಅರೆಯಹುದು.

ಸತ್ಯಮಂದಿರದಲ್ಲಿ ಉರಿವ ಜ್ಯೋತಿಯೆ ಜ್ಞಾನ,
ಸೌಂದರ್ಯ ಮಂದಿರದ ಪ್ರಣತಿ ಪ್ರೇಮ;

ಸೌಂದರ್ಯ ಸತ್ಯಗಳು ಜನನಿ ಜನಕರು ಜಗಕೆ,
ಜ್ಞಾನ ಪುರುಷನು, ಪ್ರಕೃತಿ ಮಾತೆ ಪ್ರೇಮ! –ಎಂದು ಸಂದೇಶವೀಯುತ್ತದೆ; ಎರಡನೆಯ ಪ್ರಶ್ನೆಗೆ ಉತ್ತರವಾಗಿ– "ಹೊಸಲೋಕ ಹುಟ್ಟಲಿದೆ ಇನ್ನುಮುಂದೆ- ಆಗೋಣ ಆ ಜಗದ ತಾಯಿ ತಂದೆ!" ಎಂದು ಆದೇಶವೀಯುತ್ತದೆ; ಮೂರನೆಯ ಪ್ರಶ್ನೆಗೆ ಉತ್ತರವಾಗಿ– "ಶಿವಮಸ್ತು ಸರ್ವ ಜಗತಾಂ; ಪರಹಿತ ನಿರತಾ ಭವಂತು ಭೂತಗಣಾಃ; ದೋಷಾಃ



ಪ್ರಯಾಂತು ನಾಶಂ; ಸರ್ವತ್ರ ಸುಖೀ ಭವತು ಲೋಕಃ" ಎಂದು ಆಶಿಸುತ್ತದೆ ಸಾಹಿತ್ಯ. ಉಳಿದ ವಿದ್ಯೆಗಳು ಕೊಡುವ ಉತ್ತರಗಳಿಗಿಂತ, ಸಾಹಿತ್ಯವೀಯುವ ಉತ್ತರಗಳು ಹೆಚ್ಚು ಸಮಾಧಾನಕಾರಕ, ಸಾರ್ಥಕ, ಸಮಂಜಸ, ಸಂತೋಷಜನಕವಾಗಿವೆಯಾಗಿ ಸಾಹಿತ್ಯವೂ ಸಂಪಾದನೀಯವೆಂದು ಸಾರಿ ಸಾರಿ ಹೇಳುತ್ತೇನೆ.

ಇಷ್ಟು ಸಮರ್ಥನೆ ಸಾಕು ಸಾಹಿತ್ಯದ ಬಗ್ಗೆ. ಇಷ್ಟೂ ಅನಾವಶ್ಯಕವೇ! ಆದರೂ ಈಗಿನ ವಿಪರೀತ ಪರಿಸ್ಥಿತಿಯಲ್ಲಿ ಉಪಾಯವಿಲ್ಲದೆ ಮಾಡಬೇಕಾಗಿಬಂದಿತು. ಇನ್ನು ಸಾಹಿತ್ಯ ಸಂಪಾದನೆಯ ರೀತಿ ನೀತಿಗಳನ್ನಷ್ಟು ನೋಡೋಣ. ಪ್ರತಿಭೆ, ಅಭ್ಯಾಸ, ಕೃತಿ ಪರಿಚಯ, ವಿದ್ವಜ್ಜನರ ಸಹವಾಸಗಳೇ ಸಾಹಿತ್ಯಸಂಪಾದನೆಯ ಸಾಧನ ಚತುಷ್ಟಯಗಳು (ಪ್ರತಿಭಾನಂ, ಕಾವ್ಯವಿದ್ಯಾಪ್ರಚಯ ಪರಿಚಯಂ, ವೃದ್ಧ ಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ)– ಎಂದು ನಮ್ಮ ಪೂರ್ವಿಕರು ನಿರ್ಣಯಿಸಿದ್ದಾರೆ ಪ್ರತಿಭೆಯು ಜ್ಯೋತಿಯಾದರೆ ಉಳಿದ ಮೂರು ಹಣತೆ ಎಣ್ಣೆ, ಬತ್ತಿಗಳು – ಕಾವ್ಯಜ್ಯೋತಿ ಪ್ರಕಾಶಿಸಲು. ಅಪೂರ್ವವಸ್ತು ನಿರ್ಮಾಣ ಕ್ಷಮತ್ವವುಳ್ಳ ಪ್ರಜ್ಞೆಯೇ ಪ್ರತಿಭೆ. "ತಸ್ಯ ವಿಶೇಷೋ ರಸಾವೇಶ ವೈಶದ್ಯ ಸೌಂದರ್ಯ ಕಾರ್ಯ ನಿರ್ಮಾಣ ಕ್ಷಮತ್ವಂ" ಈ ನವನವೋಲ್ಲೇಖ ಶಾಲಿನೀ, ಉನ್ಮೇಷಶಾಲಿನೀ ಪ್ರಜ್ಞೆಯು ಪರಮಾತ್ಮನ ವರ. ಆದರೂ ಪ್ರತಿಭೆ ಹತ್ತು ಪಾಲಾದರೆ ಪರಿಶ್ರಮ ತೊಂಬತ್ತು ಪಾಲೆನ್ನುತ್ತಾನೆ ಗಯಟೆ. ಕಾರ್ಲಾಯಿಲನಂತೂ ಅನಂತ ಪರಿಶ್ರಮಕ್ಷಮತ್ವವೇ ಪ್ರತಿಭೆಯೆನ್ನುತ್ತಾನೆ. ಸಾಹಿತ್ಯ ಸಾಧಕನು ಮನಸ್ಸು ಮಾಡಿದರೆ ಭಗವಂತನು ಅನುಗ್ರಹಿಸದ ಪ್ರತಿಭೆಯನ್ನೂ ಪ್ರಯತ್ನ ಪರಿಶ್ರಮಗಳಿಂದ ಪಡೆಯಬಹುದೆನ್ನುತ್ತಾನೆ ದಂಡಿ. ಕಾರಣ ಪ್ರತಿಭೆಯಷ್ಟೇ ಪರಿಶ್ರಮವೂ ಮುಖ್ಯವಾದುದು.

ಸಾಹಿತ್ಯವು ಮಾತನ್ನು ಮಂತ್ರವಾಗಿಸುವ ತಂತ್ರ. ಇಂಥ ರಸವಿದ್ಯೆಯನ್ನು ಸಾಧಿಸುವುದು ಅರಿಸ್ಟಾಟಲನು ಹೇಳುವ ಶುದ್ಧೀಕರಣವಿಲ್ಲದೆ ಹೇಗೆ ಸಾಧ್ಯವಾದೀತು? ಕಾರಣ ದೇಹಶುದ್ಧಿ, ಮನಶ್ಶುದ್ಧಿ, ದೇಶಶುದ್ಧಿ,